ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org
Company Identity Number[CIN]:- **U40109KA2004SGC035177**

ಪ್ರಸಾವನೆ:

1. ಚಾವಿಸನಿನಿ ವ್ಯಾಪ್ತಿಯಲ್ಲಿ ಸುಮಾರು 6647 ಖಾಯಂ ಅಧಿಕಾರಿ/ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯುತ್ ವಿತರಣೆಯ ನಿರ್ವಹಣೆ ಕಾರ್ಯಕ್ಕೆ ಹೆಚ್ಚು ತಾಂತ್ರಿಕ ಪ್ರಾವೀಣ್ಯತೆ ಹಾಗೂ ಹೆಚ್ಚು ಸುರಕ್ಷತ ಮುಂಜಾಗ್ರತೆಯ ಕ್ರಮಗಳು ಅವಶ್ಯಕವಾಗಿರುತ್ತದೆ. ಈ ರೀತಿಯ ವಿದ್ಯುತ್ ವಿತರಣ ಜಾಲಗಳನ್ನು ನಿರ್ವಹಿಸುವಾಗ ಯಾವುದೇ ಅನಿರೀಕ್ಷಿತವಾಗಿ ಅಪಘಾತಗಳು ಸಂಭವಿಸಿದಾಗ ನಿಗಮದ ಅಧಿಕಾರಿ/ನೌಕರರಿಗೆ ಅಂಗವೈಕಲ್ಯತೆ ಅಥವಾ ಸಾವು ಉಂಟಾದರೆ, ಅವರ ಅವಲಂಬಿತರಿಗೆ ಆರ್ಥಿಕ ಪರಿಹಾರ ನೀಡುವ ಸಂಬಂಧ **ವೈಯಕ್ತಿಕ ಅಪಘಾತ ವಿಮೆ ಯೋಜನೆ(ಗುಂಪು)**ನ್ನು ನಿಗಮವು ಅನುಷ್ಠಾನಗೊಳಸಲು ಉದ್ದೇಶಿಸಿರುತ್ತದೆ. ಈ ಯೋಜನೆ ಮೂಲಕ ಅಪಘಾತದಿಂದ ಅಂಗವೈಕಲ್ಯತೆ ಅಥವಾ ಸಾವು ಉಂಟಾದರೆ, ಅವರ ಅವಲಂಬಿತರಿಗೆ ಆರ್ಥಿಕ ಪರಿಹಾರ ನೀಡುವುದರಿಂದ ಸದರಿಯವರ ಜೀವನ ನಿರ್ವಹಣೆಗೆ ಆರ್ಥಿಕ ನೆರವು ನೀಡಿದಂತಾಗುತ್ತದೆ.
2. ಚಾವಿಸನಿನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರಿಗೆ ಅಪಘಾತದಿಂದ ಅಂಗವೈಕಲ್ಯತೆ ಅಥವಾ ಸಾವು ಸಂಭವಿಸಿದಾಗ ಅವರ ಅವಲಂಬಿತರಿಗೆ **ವೈಯಕ್ತಿಕ ಅಪಘಾತ ವಿಮೆ ಯೋಜನೆ(ಗುಂಪು)** ಯನ್ನು ಅನುಷ್ಠಾನಗೊಳಸುವ ಮೂಲಕ ಆರ್ಥಿಕ ಪರಿಹಾರವನ್ನು ನೀಡುವಂತೆ ಕವಿಪ್ರನಿನಿ ನೌಕರರ ಸಂಘ(659) ನಿಗಮವನ್ನು ಕೋರಿರುತ್ತಾರೆ.
3. ಈ ಸಂಬಂಧವಾಗಿ ಪ್ರಧಾನ ವ್ಯವಸ್ಥಾಪಕರು, ಖರೀದಿ ಶಾಖೆ, ನಿಗಮ ಕಾರ್ಯಾಲಯ, ಮೈಸೂರುರವರ ವಿಸ್ತೃತ ಕಾರ್ಯಾದೇಶ ಸಂಖ್ಯೆ:CESC/GM(P)/DGM(P)/AGM(P-1)/2020-21/CYS-1221 ದಿನಾಂಕ:24.11.2021ರಲ್ಲಿ ತಿಳಿಸಿರುವಂತೆ ದಿನಾಂಕ:14.12.2021 ರಂದು ವಾರ್ಷಿಕ ವಿಮೆ ಕಂತನ್ನು ಮುಂಗಡವಾಗಿ ಪಾವತಿಸಿದ್ದು, ಚಾವಿಸನಿನಿಯ ಅಧಿಕಾರಿ/ನೌಕರರಿಗೆ ದಿನಾಂಕ:25.11.2021 ರಿಂದ 24.11.2022ರವರೆಗಿನ ವಿಮೆ ಅವಧಿಯೊಳಗೆ ಯಾವುದೇ ಅಪಘಾತದಿಂದ ಮರಣ/ಅಶಕ್ತತೆ ಉಂಟಾದಲ್ಲಿ **ವೈಯಕ್ತಿಕ ಅಪಘಾತ ವಿಮೆ ಯೋಜನೆ(ಗುಂಪು)/PERSONAL ACCIDENT POLICY(GROUP)** ಅಡಿಯಲ್ಲಿ ವಿಮೆ ಸೌಲಭ್ಯವನ್ನು ಒದಗಿಸಲು M/s IFFCO-TOKIO General Insurance Company Limited ರವರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.
4. ಸದರಿ ವಿಸ್ತೃತ ಕಾರ್ಯಾದೇಶ ಹಾಗೂ ಒಪ್ಪಂದದನ್ವಯ, ವಿಮಾ ಅವಧಿಯೊಳಗೆ ಚಾವಿಸನಿನಿ ಅಧಿಕಾರಿ/ನೌಕರರಿಗೆ ಯಾವುದೇ ಅಪಘಾತದಿಂದ ಮರಣ/ಅಶಕ್ತತೆ ಉಂಟಾದರೆ 60 ತಿಂಗಳ ಒಟ್ಟು ವೇತನವನ್ನು (ಕನಿಷ್ಠ ರೂ.25 ಲಕ್ಷಗಳು ಮತ್ತು ಗರಿಷ್ಠ ರೂ 50 ಲಕ್ಷಗಳ ಮಿತಿಗೊಳಪಟ್ಟು M/s IFFCO-TOKIO General Insurance Company Limited ರವರ ವತಿಯಿಂದ ಪಾವತಿ ಮಾಡಲಾಗುವುದು.
5. ಸದರಿ **ವೈಯಕಿಕ ಅಪಘಾತ ವಿಮೆ ಯೋಜನೆ(ಗುಂಪು)/PERSONAL ACCIDENT POLICY(GROUP)**ಯನ್ನು ಅನುಷ್ಠಾನಗೊಳಸುವ ಸಂಬಂಧ ನಿಗಮದಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಚಾವಿಸನಿನಿ/ಪ್ರವ್ಯ/02/02/2021-22/** cys-1398

**ದಿನಾಂಕ:** 15 DEC 2021

ಚಾವಿಸನಿನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ **ವೈಯಕ್ತಿಕ ಅಪಘಾತ ವಿಮೆ ಯೋಜನೆ(ಗುಂಪು)/ PERSONAL ACCIDENT POLICY(GROUP)** ಅಡಿಯಲ್ಲಿ ದಿನಾಂಕ: 25.11.2021 ರಿಂದ 24.11.2022ರವರೆಗಿನ ವಿಮಾ ಅವಧಿಯೊಳಗೆ ಯಾವುದೇ ಅಪಘಾತದಿಂದ ಮರಣ ಅಥವಾ ಅಶಕ್ತತೆ ಉಂಟಾದಲ್ಲಿ M/s IFFCO-TOKIO General Insurance Company Limited ರವರ ವತಿಯಿಂದ ಅಧಿಕಾರಿ/ನೌಕರರ ಅವಲಂಬಿತರಿಗೆ ಪರಿಹಾರ ಮೊತ್ತವನ್ನು ಪಾವತಿಸಲು ಈ ಕೆಳಕಂಡ ನಿಯಮ/ಷರತ್ತುಗಳಗೆ ಒಳಪಟ್ಟು ನಿಗಮದ ಅನುಮೋದನೆ ನೀಡಲಾಗಿದೆ:-

1. ಚಾವಿಸನಿನಿಯ ಆಡಳತ ವ್ಯಾಪ್ತಿಯ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರತಿ ಅಧಿಕಾರಿ/ನೌಕರರುಗಳಗೆ (6648 ಸಂಖ್ಯೆ) ವಾರ್ಷಿಕ ವಿಮಾ ಕಂತು ರೂ. 1450/- ಗಳಂತೆ ಚಾವಿಸನಿನಿಯಿಂದ M/s IFFCO-TOKIO General Insurance Company Limited ಇವರಿಗೆ ಒಟ್ಟು ಮೊತ್ತ ರೂ. 96,38,150/- ಗಳನ್ನು (ತೊಂಭತ್ತಾರು ಲಕ್ಷದ ಮೂವತ್ತೆಂಟು ಸಾವಿರದ ಒಂದು ನೂರ ಐವತ್ತು ಮಾತ್ರ) ದಿನಾಂಕ:14.12.2021 ರಂದು ಮುಂಗಡವಾಗಿ ಪಾವತಿ ಮಾಡಲಾಗಿರುತ್ತದೆ.

ಮು.ತಿ.ನೋ.

2. ಚಾವಿಸನಿನಿಯ ಅಧಿಕಾರಿ/ನೌಕರರಿಗೆ ದಿನಾಂಕ: 25.11.2021 ರಿಂದ 24.11.2022ರವರೆಗಿನ ವಿಮೆ ಅವಧಿಯಲ್ಲಿ ಯಾವುದೇ ಅಪಘಾತದಿಂದ ಮರಣ ಅಥವಾ ಅಶಕ್ತತೆ ಉಂಟಾದಲ್ಲಿ ಅಧಿಕಾರಿ/ನೌಕರನ ಅವಲಂಬಿತರಿಗೆ M/s IFFCO-TOKIO General Insurance Company Limited ರವರ ವತಿಯಿಂದ ಈ ಕೆಳಕಂಡಂತೆ ಪರಿಹಾರ ಪಾವತಿ ಮಾಡಲಾಗುವುದು.

| SL. No | Particulars | Insurance Coverage |
|---|---|---|
| 1 | Death only | Rs.50,00,000/- or 60 Months gross salary income of the employee whichever is lower, subject to minimum of Rs. 25,00,000/- |
| 2 | Loss of two limbs or two eyes or one limb and one eye | Rs.25,00,000/- |
| 3 | Loss of one limb or one eye | Rs.12,50,000/- |
| 4 | Permanent Total disability(PTD) from injuries other than those named above | Rs.25,00,000/- |
| 5 | Permanent Partial Disability | Percentage of benefits as per annexure-A(As per Schedule-1 of Employee Compensation Act, 1923) |
| 6 | Temporarily total Disability | Rs.10,000/- per week up to 104 weeks. |

3. ಚಾವಿಸನಿನಿಯ ಪರವಾಗಿ ಪ್ರಧಾನ ವ್ಯವಸ್ಥಾಪಕರು, ಖರೀದಿ ಶಾಖೆ, ನಿಗಮ ಕಾರ್ಯಾಲಯ, ಮೈಸೂರುರವರು M/s IFFCO-TOKIO General Insurance Company Limited ರವರೊಂದಿಗೆ 24.11.2021ರಂದು ಒಡಂಬಡಿಕೆ ಮಾಡಿಕೊಂಡಿರುತ್ತಾರೆ.

4. **ವಾರ್ಷಿಕ ವಿಮಾ ಕಂತಿನ ಮೊತ್ತ ರೂ.1450/- (ರೂ. ಒಂದು ಸಾವಿರದ ನಾಲ್ಕು ನೂರ ಐವತ್ತು ಮಾತ್ರ)ಗಳನ್ನು ಚಾವಿಸನಿನಿಯ ಪ್ರತಿ ಅಧಿಕಾರಿ/ನೌಕರರ ಡಿಸೆಂಬರ್-2021 ರ ಮಾಹೆಯ ವೇತನದಲ್ಲಿ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಕಡ್ಡಾಯವಾಗಿ ಮುರಿಕೆ ಮಾಡುವುದು.**

5. ನಿಗಮ ಕಛೇರಿಯ ಆಂತರಿಕ ನಿರ್ವಹಣೆ ಶಾಖೆಯಲ್ಲಿ ವಿಮಾ ಮೊತ್ತಕ್ಕೆ ಹುಂಡಿ ಪಾಸು ಮಾಡಿ ಪಾವತಿಯನ್ನು ಲೆಕ್ಕಕ್ಕೆ ತೆಗೆದುಕೊಂಡ ನಂತರ ಆಯಾ ಘಟಕಗಳ ವೆಚ್ಚವನ್ನು ಪ್ರತ್ಯೇಕವಾಗಿ ಎ.ಟಿ. ಮುಖಾಂತರ ಎಲ್ಲಾ ಲೆಕ್ಕ ಘಟಕಗಳಿಗೆ ವರ್ಗಾಯಿಸುವುದು. ಲೆಕ್ಕ ಘಟಕಗಳು ಅಂಗೀಕಾರ ನೀಡುವ ಮೂಲಕ ವೆಚ್ಚವನ್ನು ಲೆಕ್ಕೀಕರಿಸಿಕೊಳ್ಳುವುದು.

6. ಅನುಬಂಧದಲ್ಲಿ ಅಧಿಕಾರಿ/ನೌಕರರುಗಳ ವಿವರಗಳನ್ನು 'ಎಕ್ಸೆಲ್' ತಂತ್ರಾಂಶದಲ್ಲಿ ಭರ್ತಿ ಮಾಡಿ, ಮೆದು ಪ್ರತಿಯನ್ನು (Soft copy) gmhrd@cescmysore.org ಮತ್ತು agmahr@cescmysore.org ಇ-ಮೇಲ್ ವಿಳಾಸಕ್ಕೆ ಕಳುಹಿಸುವುದು ಹಾಗೂ ಕಛೇರಿ ಮುಖ್ಯಸ್ಥರ ಮೊಹರಿನೊಂದಿಗೆ ಸಹಿ ಮಾಡಿರುವ 'Hard copy'ಯನ್ನು ಪ್ರಧಾನ ವ್ಯವಸ್ಥಾಪಕರು (ಆ&ಮಾ.ಸಂ) ರವರಿಗೆ ದಿನಾಂಕ: 15.01.2022ರ ಒಳಗಾಗಿ ತಲುಪಿಸುವುದು.

7. ಚಾವಿಸನಿನಿಯಿಂದ ವರ್ಗಾವಣೆ/ನಿವೃತ್ತಿಯಾದ ಅಧಿಕಾರಿ/ನೌಕರರು ಚಾವಿಸನಿನಿಯಲ್ಲಿ ಕರ್ತವ್ಯದಿಂದ ಬಿಡುಗಡೆಗೊಂಡ ದಿನಾಂಕದಿಂದ ವಿಮೆ ಸೌಲಭ್ಯಕ್ಕೆ ಒಳಪಡುವುದಿಲ್ಲ. ವೃತ್ತವಾರು ನೇಮಕಾತಿ/ವರ್ಗಾವಣೆಯಿಂದ ಹೊಸದಾಗಿ ಸೇರ್ಪಡೆಯಾಗುವ ಅಧಿಕಾರಿ/ನೌಕರರನ್ನು ವಿಮೆಗೆ ಒಳಪಡಿಸಲು, ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳು (ದಿನಾಂಕ:25.11.2021ರ ನಂತರ ನಿಗಮಕ್ಕೆ ವರ್ಗಾವಣೆ/ಸೇರ್ಪಡೆಗೊಂಡ ದಿನದಿಂದ ದಿನಾಂಕ: 15.01.2022 ರವರೆಗೆ) ವಿಮೆ ಕಂತನ್ನು ಕಡಿತಗೊಳಿಸಿ ಮೊತ್ತವನ್ನು ನೇರವಾಗಿ M/s IFFCO-TOKIO General Insurance Company Limited ಮೈಸೂರು ಇವರಿಗೆ ಕಳುಹಿಸುವುದು. ಅಧಿಕಾರಿ/ನೌಕರರುಗಳ ವಿವರಗಳನ್ನು ಈ ಕಛೇರಿಗೆ ಮಾಹಿತಿಗಾಗಿ ಸಲ್ಲಿಸುವುದು.

8. ಚಾವಿಸನಿನಿಯ ಅಧೀನ ಕಛೇರಿಗಳು ತಮ್ಮ ಆಡಳಿತ ವ್ಯಾಪ್ತಿಯಲ್ಲಿನ ಸಿಬ್ಬಂದಿಯು ಅಪಘಾತದಿಂದ ನಿಧನ ಅಥವಾ ಅಶಕ್ತತೆ ಹೊಂದಿದಲ್ಲಿ ಕೂಡಲೇ m.bhaskar@iffcotokio.co.in ಇ-ಮೇಲ್ ವಿಳಾಸಕ್ಕೆ ವಿವರಗಳನ್ನು ಕಳುಹಿಸುವುದು ಹಾಗೂ "ಸೀನಿಯರ್ ಡಿವಿಷನ್ ಮ್ಯಾನೇಜರ್ M/s IFFCO-TOKIO General Insurance Company Limited #35, 1st floor, New Kantharaj Urs Road, Opposite Akshaya Bhandar, Kuvempunagara, Mysuru-570023 ರವರಿಗೆ ನೇರವಾಗಿ ಮಾಹಿತಿ ನೀಡಿ, ನಂತರ 30 ದಿನಗಳೊಳಗಾಗಿ ಲಗತ್ತಿಸಿರುವ ಕ್ಲೈಮ್ ಫಾರಂನೊಂದಿಗೆ ಎಲ್ಲಾ ದಾಖಲಾತಿಗಳನ್ನು ದೃಢೀಕರಿಸಿ, ವಿಮಾ ಪರಿಹಾರಕ್ಕಾಗಿ ಕಳುಹಿಸುವುದು. ಸದರಿ ಪ್ರಸ್ತಾವನೆಯನ್ನು ಮಾಹಿತಿಗಾಗಿ ಪ್ರಧಾನ ವ್ಯವಸ್ಥಾಪಕರು(ಆ&ಮಾಸಂ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇಲ್ಲಿಗೆ ಸಲ್ಲಿಸುವುದು. ಈ ಸಂಬಂಧ ವಿಮಾ ಪರಿಹಾರಕ್ಕಾಗಿ ಅಗತ್ಯವಿರುವ ಮಾಹಿತಿಯನ್ನು ಮತ್ತು ದಾಖಲಾತಿಗಳನ್ನು ವಿಮಾ ಕಂಪನಿಗೆ ವಿಳಂಬ ಮಾಡದೆ ಕಳುಹಿಸುವ ಹೊಣೆಗಾರಿಕೆಯು ಸಂಬಂಧಪಟ್ಟ ವಲಯ/ವೃತ್ತ/ವಿಭಾಗ ಕಚೇರಿಗಳ ಮುಖ್ಯಸ್ಥರದ್ದಾಗಿರುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಿಗಮ ಕಛೇರಿಯಲ್ಲಿ ಚರ್ಚಿಸಲು ಸಭೆಯನ್ನು ನಿಗಧಿಪಡಿಸಿದಾಗ ಅಗತ್ಯ ಮಾಹಿತಿಗಳೊಂದಿಗೆ ಹಾಜರಾಗುವುದು.

ಮುಂದುವರೆದಿದೆ. . .

9. M/s IFFCO-TOKIO General Insurance Company Limited ರವರ ವತಿಯಿಂದ ನೀಡಿರುವ ಮಾಹಿತಿ ಪತ್ರದಲ್ಲಿ ನಮೂದಿಸಿರುವ ವಿಳಾಸ/ಪೋನ್ ನಂಬರ್/ಇ-ಮೇಲ್ ಐಡಿ ಗಳನ್ನು ಕ್ಲೈಮ್ ಇತ್ಯರ್ಥ ಹಾಗೂ ಇತರೆ ಗೊಂದಲಗಳ ಸಂದರ್ಭದಲ್ಲಿ ಸಂಪರ್ಕಿಸುವುದು. ಪ್ರಧಾನ ವ್ಯವಸ್ಥಾಪಕರು, ಖರೀದಿ ಶಾಖೆ, ನಿಗಮ ಕಾರ್ಯಾಲಯ, ಮೈಸೂರುರವರು ಹೊರಡಿಸಿರುವ ವಿಸ್ತೃತ ಕಾರ್ಯಾದೇಶದ ಪ್ರತಿಯನ್ನು ಹೆಚ್ಚಿನ ಮಾಹಿತಿಗಾಗಿ ಲಗತ್ತಿಸಿದೆ.
10. ಚಾವಿಸನಿನಿಯ ಆಡಳಿತ ವ್ಯಾಪ್ತಿಯ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರತಿ ಅಧಿಕಾರಿ/ನೌಕರರುಗಳು ವಿದ್ಯುತ್ ಅಪಘಾತ/ಇತರೆ ಅಪಘಾತಗಳಿಂದ ಮರಣ ಹೊಂದಿದ್ದಲ್ಲಿ ಸದರಿರವರ ವಾರಸುದಾರರಿಂದ ಅಗತ್ಯ ದಾಖಲೆಗಳನ್ನು ಪಡೆದು ಅಧಿಕಾರಿ/ನೌಕರರುಗಳಿಗೆ ನಿಯಮಿತ ಅವಧಿಯಲ್ಲಿ M/s IFFCO-TOKIO General Insurance Company Limited ರವರ ವತಿಯಿಂದ ವಿಮಾ ಮೊತ್ತದ ಕ್ಲೈಮ್ ಇತ್ಯರ್ಥಪಡಿಸಲು ವಿಭಾಗಾಧಿಕಾರಿಗಳು ಹಾಗೂ ವೇತನ ಬಟವಾಡೆ ಅಧಿಕಾರಿಗಳು ಅಗತ್ಯ ಕ್ರಮವಹಿಸುವುದು. ಇಲ್ಲದಿದ್ದಲ್ಲಿ ಸದರಿ ವಿಭಾಗಾಧಿಕಾರಿಗಳು ಹಾಗೂ ವೇತನ ಬಟವಾಡೆ ಅಧಿಕಾರಿಗಳನ್ನು ನೇರ ಹೊಣೆಗಾರರಾಗಿ ಮಾಡಲಾಗುತ್ತದೆ.

| |
|---|
| ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ. |

ಆದೇಶದ ಮೇರೆಗೆ

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂ)
ಚಾವಿಸನಿನಿ., ಮೈಸೂರು.

**ಪ್ರತಿಗಳು:**

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರ ಅವಗಾಹನೆಗಾಗಿ.
- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ ಇವರ ಮಾಹಿತಿಗಾಗಿ.
- ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ, ಇವರ ಮಾಹಿತಿಗಾಗಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿರವರ ಮಾಹಿತಿಗಾಗಿ.
- ಉಪ ಪ್ರಧಾನ ವ್ಯವಸ್ಥಾಪಕರು, ಎಂ.ಐ.ಎಸ್., ನಿಗಮ ಕಛೇರಿ, ಚಾವಿಸನಿನಿ, ಮೈಸೂರುರವರು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
- ಎಲ್ಲಾ ಲೆಕ್ಕಾಧಿಕಾರಿಗಳು/ಲೆಕ್ಕಾಧಿಕಾರಿಗಳು(ಆಂ.ಪ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿರವರ ಮಾಹಿತಿಗಾಗಿ.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿರವರುಗಳ ಆಪ್ತ ಕಾರ್ಯ ದರ್ಶಿಗಳಿಗೆ ಕಳುಹಿಸುತ್ತ, ಸುತ್ತೋಲೆಯ ಮಾಹಿತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿಯವರ ಗಮನಕ್ಕೆ ತರುವಂತೆ ಕೋರಿದೆ.
- ಕಂಪನಿ ಕಾರ್ಯದರ್ಶಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ
- ವ್ಯ-1/ಪ್ರ.ಕ.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ.**

- ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಆನಂದರಾವ್ ವೃತ್ತ, ಬೆಂಗಳೂರು.
- ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಆನಂದರಾವ್ ವೃತ್ತ, ಬೆಂಗಳೂರು.
- ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ/ಕವಿಮಂ ಇಂಜಿನಿಯರ್‌ಗಳ ಸಂಘ/ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ/ಕವಿಪ್ರನಿನಿ ಪ.ಜಾತಿ ಮತ್ತು ಪ.ಪಂಗಡಗಳ ಕಲ್ಯಾಣ ಸಂಸ್ಥೆ/ಡಿಪ್ಲೊಮೊ ಇಂಜಿನಿಯರ್‌ಗಳ ಸಂಘ ಬೆಂಗಳೂರು.
- ಉಪಾಧ್ಯಕ್ಷರು, ಕವಿಪ್ರನಿನಿ, ನೌಕರರ ಸಂಘ, ರಿ(659), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.